**ದಿನಾಂಕ: 10-05-2017 ರಂದು ಕುಕ್ಕವಾಡ ಗ್ರಾಮದ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್‌ನ ಆವರಣದಲ್ಲಿ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಇವರು ಸಕ್ಕರೆ ಘಟಕದ ಕಬ್ಬು ನುರಿಯುವ ಸಾಮರ್ಥ್ಯವನ್ನು ದಿನಕ್ಕೆ 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಘಟಕದ ಸಾಮರ್ಥ್ಯವನ್ನು 24 ಮೆ.ವ್ಯಾಟ್‌ನಿಂದ 54 ಮೆ. ವ್ಯಾಟ್‌ಗೆ ಹೆಚ್ಚಿಸಲು ಉದ್ದೇಶಿಸಿರುವ ಬಗ್ಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡಾವಳಿಗಳು.**

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : ಮೆ॥ ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್‌ನ ಆವರಣ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. |
| ದಿನಾಂಕ | : 10-05-2017. |
| ಅಧ್ಯಕ್ಷತೆ | : ಶ್ರೀ ಡಿ.ಎಸ್. ರಮೇಶ್, ಭಾ.ಆ.ಸೇ.<br>ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,<br>ಜಿಲ್ಲಾ ಪರಿಸರ ಸಾರ್ವಜನಿಕ ಸಭೆ ಸಮಿತಿ, ದಾವಣಗೆರೆ. |
| ಹಾಜರಿದ್ದ ಅಧಿಕಾರಿಗಳ ವಿವರ | : **ಅನುಬಂಧ-1** |
| ಯೋಜನಾದಾರರ ವತಿಯಿಂದ ಹಾಜರಿದ್ದ ಪ್ರತಿನಿಧಿಗಳ ವಿವರ | : **ಅನುಬಂಧ-2** |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : **ಅನುಬಂಧ-3** |
| ಸಾರ್ವಜನಿಕರಿಂದ ಸ್ವೀಕೃತವಾದ ಅಹವಾಲುಗಳು | : **ಇಲ್ಲ** |

**ಪೀಠಿಕೆ:-**

ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಇವರು ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, ಕುಕ್ಕವಾಡ ಗ್ರಾಮದ ಸರ್ವೆ ನಂ.38/2, 40/(1 ರಿಂದ 6), 50/2, 51/(1 ರಿಂದ 5), 44, 52/1&2, 71/ಪಿ (ಒಟ್ಟು 153 ಎಕರೆ 20 ಗುಂಟೆ) ಸಕ್ಕರೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯ ಘಟಕವನ್ನು ನಡೆಸುತ್ತಿರುತ್ತಾರೆ. ಸದರಿ ಕಂಪನಿಯವರು ಪ್ರಸ್ತುತ 4800 ಟಿಸಿಡಿ ಕಬ್ಬು ನುರಿಯುವ ಮತ್ತು 24 ಮೆ.ವ್ಯಾಟ್ ಕೋ-ಜೆನ್ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಈಗ ಸಕ್ಕರೆ ಉದ್ಯಮ ಘಟಕದ ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸಲು ಪ್ರಸ್ತುತ ಉದ್ಯಮದ ಆವರಣದಲ್ಲೇ ವಿಸ್ತರಿಸಲು ಪ್ರಸ್ತಾಪಿಸಿರುತ್ತಾರೆ.

ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ ಇವರು ದಿನಾಂಕ: 14.09.2006 ರಂದು ಹೊರಡಿಸಿರುವ ಪರಿಸರ ಅಘಾತ ಅಂದಾಜೀಕರಣ ಅಧಿಸೂಚನೆ ಪ್ರಕಾರ ಸದರಿ ಯೋಜನೆಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ನಿರ್ದೇಶಕರು ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ ಇವರು ಸದರಿ ಯೋಜನೆಗೆ Terms of References (ಟಿ.ಓ.ಅರ್) ಅಂತಿಮಗೊಳಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆ ನಡೆಸಲು ಕೋರುವಂತೆ ಯೋಜನಾದಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ 'ಕರಡು ಪರಿಸರ' ಅಘಾತ ಅಂದಾಜೀಕರಣ ವರದಿಯನ್ನು ಮತ್ತು ಇದರ ಕನ್ನಡ ಮತ್ತು ಇಂಗ್ಲೀಷ್ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿ ಕೇಂದ್ರ ಸರ್ಕಾರದ ಪರಿಸರ ಅಘಾತ ಅಧ್ಯಯನ ಅಧಿಸೂಚನೆ-2006ರ ಪ್ರಕಾರ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರು ಕೋರಿ ಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಯೋಜನೆಗೆ ಸಂಬಂದಪಟ್ಟಂತೆ ಪರಿಸರ ಸಾರ್ವಜನಿಕ ಸಭೆಯನ್ನು **ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆಯ, ಕುಕ್ಕವಾಡ ಗ್ರಾಮದ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಆವರಣದಲ್ಲಿ ದಿನಾಂಕ:10-05-2017 ರಂದು ಬೆಳಗ್ಗೆ 11:00 ಘಂಟೆಗೆ** ನಿಗದಿಪಡಿಸಲಾಗಿತ್ತು.

ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರ ಪ್ರಸ್ತುತ ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸಲು ಉದ್ದೇಶಿಸಿರುವ ಯೋಜನೆಗೆ ಕುರಿತಂತೆ **ದಿನಾಂಕ: 10-05-2017 ರಂದು** ಬೆಳಿಗ್ಗೆ 11:00 ಘಂಟೆಗೆ ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, ಕುಕ್ಕವಾಡ ಗ್ರಾಮದ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಆವರಣದಲ್ಲಿ ಪರಿಸರ ಸಾರ್ವಜನಿಕ ಸಭೆ ನಡೆಸಲು ಉದ್ದೇಶಿಸಲಾಯಿತು.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಇಂಗ್ಲೀಷ್ ಪತ್ರಿಕೆಯಾದ **"ಡೆಕ್ಕನ್ ಹೆರಾಲ್ಡ್"** ಮತ್ತು ಕನ್ನಡ ಪತ್ರಿಕೆಯಾದ **"ವಿಜಯ ಕರ್ನಾಟಕ"** ದಿನ ಪತ್ರಿಕೆಗಳಲ್ಲಿ ದಿನಾಂಕ: 10-04-2017 ರಂದು ನೀಡಲಾಗಿರುತ್ತದೆ. ಅಲ್ಲದೇ ಸ್ಥಳೀಯರ ಮಾಹಿತಿಗಾಗಿ ಸ್ಥಳೀಯ ಕನ್ನಡ ದಿನ ಪತ್ರಿಕೆ ಯಾದ **"ಜನತಾವಾಣಿ"**ಯಲ್ಲೂ ಸಹ ದಿನಾಂಕ:10-04-2017 ರಂದು ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ಪತ್ರಿಕಾ ಪ್ರಕಟಣೆಯಲ್ಲಿ, ಯೋಜನಾ ಸ್ಥಳದಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆ, ಅಭಿಪ್ರಾಯ, ಟೀಕೆ-ಟಿಪ್ಪಣಿ ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ ಸಮಿತಿ (ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ) ಇವರಿಗೆ, ಅಧಿಸೂಚನೆ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಯೋಜನೆಯ ಪರಿಸರ ಅಘಾತ ಅಂದಾಜೀಕರಣ ವರದಿ ಹಾಗೂ ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ದಾವಣಗೆರೆ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ, ಆಯುಕ್ತರು, ದಾವಣಗೆರೆ ಮಹಾನಗರ ಪಾಲಿಕೆ, ದಾವಣಗೆರೆ, ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ತಾಲ್ಲೂಕು ಪಂಚಾಯಿತಿ, ದಾವಣಗೆರೆ, ತಹಶೀಲ್ದಾರರು, ತಹಶೀಲ್ದಾರವರ ಕಾರ್ಯಾಲಯ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ, ಗ್ರಾಮ ಪಂಚಾಯಿತಿ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಿಭಾಗೀಯ ಕಛೇರಿ, ಚಿತ್ರದುರ್ಗ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ದಾವಣಗೆರೆ, ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, (ದಕ್ಷಿಣ ವಲಯ ಕಛೇರಿ), ಬೆಂಗಳೂರು ಹಾಗೂ ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೇಂದ್ರ ಕಛೇರಿ, ಬೆಂಗಳೂರು ಈ ಸ್ಥಳಗಳಲ್ಲಿ ಇಡಲಾಗಿತ್ತು.

**ಇದರನ್ವಯ ಈ ಕೆಳಗಿನಂತೆ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಿರುತ್ತಾರೆ.**

1. **ಶ್ರೀಮತಿ ವೋತಕುರಿ ಸುನಂದ ರೆಡ್ಡಿ, ಪರಿಸರವಾದಿ, ಅಧ್ಯಕ್ಷರು, ಧರಿತ್ರಿ ಪರ್ಯಾವರಣ್ ಪರಿರಕ್ಷಣ್ ಸಂಸ್ಥಾ, ನೆಲಗೊಂಡ ಜಿಲ್ಲೆ, ತೆಲಂಗಾಣ ರಾಜ್ಯ.**

   ಇವರು ಈ ಕಛೇರಿಗೆ ಮನವಿಯನ್ನು ಸಲ್ಲಸುತ್ತಾ, ಸದರಿ ಕಾರ್ಖಾನೆಯವರ ಪ್ರಸ್ತುತ ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸಲು ಉದ್ದೇಶಿಸಿರುವ ಯೋಜನೆಯನ್ನು ಸ್ವಾಗತ್ತಿಸುತ್ತಾ, ಭಾರತ ದೇಶದಲ್ಲಿ ಸುಮಾರು 40 ಕೋಟಿ ಯುವಕರು ಉದ್ಯೋಗಕ್ಕಾಗಿ ಕಾಯುತ್ತಿದ್ದು, ಕಾರ್ಖಾನೆಗಳ ಅಭಿವೃದ್ಧಿಯಿಂದ ಯುವಕರಿಗೆ ಉದ್ಯೋಗಾವಕಾಶ ದೊರೆಯುತ್ತವೆ. ಸದರಿ ಕಾರ್ಖಾನೆಯವರು ಮಳೆ ನೀರು ಕ್ಲೋಯು ಮತ್ತು ಮಳೆ ನೀರು ಸಂಗ್ರಹಣಾ ತೊಟ್ಟಿಗಳನ್ನು ನಿರ್ಮಿಸುವುದರಿಂದ ಕಾರ್ಖಾನೆಗೆ ಮತ್ತು ಅಂತರ್ಜಲ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಮಳೆಗಾಲದಲ್ಲಿ ಮಳೆ ನೀರನ್ನು ಸಂಗ್ರಹಿಸುವುದರಿಂದ ಬೇಸಿಗೆ ಕಾಲದಲ್ಲಿ ಉಪಯೋಗಕ್ಕೆ ಬರುತ್ತದೆ. ಕಾರ್ಖಾನೆಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಗಿಡ ಮರಗಳನ್ನು ನೆಡುವುದು, ರಸ್ತೆಗಳ ಅಭಿವೃದ್ಧಿಯಿಂದ ವಾಯು ಮಾಲಿನ್ಯವನ್ನು ತಡೆಗಟ್ಟಬಹುದು. ಕಾರ್ಖಾನೆಯಲ್ಲಿ ಸ್ಥಳೀಯ ವಿದ್ಯಾವಂತರಿಗೆ ಉದ್ಯೋಗವನ್ನು ನೀಡುವುದು. ಕಾರ್ಖಾನೆಯ ಸುತ್ತಮುತ್ತಲಿನ ಗ್ರಾಮಗಳ ಅಭಿವೃದ್ಧಿಗೆ ಕಾರ್ಖಾನೆಯ ಸಿ.ಎಸ್.ಆರ್.ಅಂದಾಜು ಪಟ್ಟಿಯ ಪ್ರಕಾರ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಕಾರ್ಖಾನೆಯ ಅಧಿಕಾರಿಗಳು, ಸಂಬಂಧಿಸಿದ ಸರ್ಕಾರಿ ಅಧಿಕಾರಿಗಳು, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳ ಮತ್ತು ಗ್ರಾಮಸ್ಥರಗಳನ್ನೊಳಗೊಂಡ ಸಮನ್ವಯ ಸಮಿತಿಯನ್ನು ರಚಿಸುವುದು ಉತ್ತಮ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

2. **ಶ್ರೀ ಹೆಚ್.ಮಧುಬಾಬು, ಅಧ್ಯಕ್ಷರು, (REEHAS) Rural Environment Education and Health Awareness Society, ಹೈದ್ರಾಬಾದ್.**

ಇವರು ಈ ಕಛೇರಿಗೆ ಮನವಿಯನ್ನು ಸಲ್ಲಸುತ್ತಾ, ಸದರಿ ಕಾರ್ಖಾನೆಯವರ ಪ್ರಸ್ತುತ ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸಲು ಉದ್ದೇಶಿಸಿರುವ ಯೋಜನೆಯನ್ನು ಸ್ವಾಗತ್ತಿಸುತ್ತಾ, ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತ ಸಮಯದಲ್ಲಿ ಭಾರತದ ಜನಸಂಖ್ಯೆ 30 ಕೋಟಿಯಷ್ಟಿದ್ದು, ಈಗ 110 ಕೋಟಿ ಜನಸಂಖ್ಯೆ ಹೊಂದಿರುತ್ತದೆ. ಪ್ರತಿ ವರ್ಷ 50 ಲಕ್ಷ ಪದವಿಧರರು ಹೊರ ಬರುತ್ತಿದ್ದು, ಸರ್ಕಾರು ಕೇವಲ 5 ಲಕ್ಷ ಜನರಿಗೆ ಮಾತ್ರ ಒದಗಿಸಲು ಸಾಧ್ಯವಾಗಿರುತ್ತದೆ. ಉಳಿದವರು ಖಾಸಗಿ ಕಂಪನಿ/ಕಾರ್ಖಾನೆಗಳಲ್ಲಿ ಉದ್ಯೋವನ್ನು ಪಡೆದುಕೊಂಡಿರುತ್ತಾರೆ. ಆದ್ದರಿಂದ ಇಂತಹ ಖಾಸಗಿ ಕಾರ್ಖಾನೆಗಳ ಅಭಿವೃದ್ಧಿಯನ್ನು ಸ್ವಾಗತಿಸುತ್ತೇವೆ. ಸದರಿಯವರು ಸದರಿ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಕೆಲವು ಸಲಹೆಗಳನ್ನು ನೀಡಿರುತ್ತಾರೆ.

ಅ) ಸದರಿ ಕಾರ್ಖಾನೆಯ ಸುತ್ತಮುತ್ತಲಿನ ವ್ಯವಸಾಯ ಜಮೀನುಗಳ ಬೆಳೆ ಉತ್ಪಾದನಾ ಅಂಕಿ ಅಂಶಗಳನ್ನು ಪಡೆದುಕೊಳ್ಳುವುದು.

ಆ) ಸದರಿ ಕಾರ್ಖಾನೆಯವರು ಮಳೆ ನೀರು ಕ್ಲೋಯು ಮತ್ತು ಮಳೆ ನೀರು ಸಂಗ್ರಹಣಾ ತೊಟ್ಟಿಗಳನ್ನು ನಿರ್ಮಿಸುವುದರಿಂದ ಕಾರ್ಖಾನೆಗೆ ಮತ್ತು ಅಂತರ್ಜಲ ಅಭಿವೃದ್ಧಿಗೆ ಅನುಕೂಲವಾಗುತ್ತದೆ.

ಇ) ಕಾರ್ಖಾನೆಯ ಸುತ್ತಮುತ್ತ ವಾಯು ಮಾಲಿನ್ಯವನ್ನು ನಿಯಂತ್ರಿಸಲು ರಸ್ತೆಗಳಿಗೆ ನೀರು ಸಿಂಪರಣೆ ವ್ಯವಸ್ಥೆ ಮಾಡುವುದು, ಕಾರ್ಖಾನೆಯಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಗಿಡಮರಗಳಿಗೆ ಉಪಯೋಗಿಸಿಕೊಳ್ಳುವುದು.

ಈ) ಸದರಿ ಕಾರ್ಖಾನೆಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮತ್ತು ರಸ್ತೆಗಳ ಬದಿಗಳಲ್ಲಿ ಗಿಡ ಮರಗಳನ್ನು ನೆಡುವುದು.

ಉ) ಕಾರ್ಖಾನೆಯಲ್ಲಿ ಉದ್ಯೋಗದಲ್ಲಿ ಸ್ಥಳೀಯರಿಗೆ ಪ್ರಥಮ ಆದ್ಯತೆ ನೀಡುವುದು.

ಊ) ಕಾರ್ಖಾನೆಯ ಸುತ್ತಮುತ್ತಲಿನ ಗ್ರಾಮಸ್ಥರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದು, ವೈದ್ಯಕೀಯ ಶಿಬಿರಗಳನ್ನು ನಡೆಸುವುದು.

ಋ) ಕಾರ್ಖಾನೆಯ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಕುಡಿಯುವ ನೀರಿನ ವ್ಯವಸ್ಥೆ, ಮಕ್ಕಳಿಗೆ ವಿದ್ಯಾಭ್ಯಾಸದ ವ್ಯವಸ್ಥೆ ಮತ್ತು ಗ್ರಾಮದ ಮುಖ್ಯ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು.

**ದಿನಾಂಕ:** 10-05-2017 **ರಂದು** ಬೆಳಿಗ್ಗೆ 11:00 ಘಂಟೆಗೆ ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, ಕುಕ್ಕವಾಡ ಗ್ರಾಮದ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಆವರಣದಲ್ಲಿ ಪರಿಸರ ಸಾರ್ವಜನಿಕ ಸಭೆ ನಡೆಸಲಾಯಿತು. ಶ್ರೀ ಕೆ.ಎಸ್.ಮಂಜುನಾಥ, ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ದಾವಣಗೆರೆ ಇವರು ಶ್ರೀ ಡಿ.ಎಸ್.ರಮೇಶ್,ಭಾ.ಆ.ಸೇ., ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ, ಶ್ರೀ ಎಂ.ಕೆ. ಪ್ರಭುದೇವ, ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ, ಚಿತ್ರದುರ್ಗ ಇವರನ್ನು ಸಭೆಗೆ ಸ್ವಾಗತಿಸುತ್ತಾ, ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯರವರ ಪರಿಸರ ಅಘಾತ ಅಧಿಸೂಚನೆ 2006 ರನ್ವಯ, ಸದರಿ ಪರಿಸರ ಸಾರ್ವಜನಿಕ ಸಭೆ ನಡೆಸಲು ತೆಗೆದುಕೊಂಡ ಕ್ರಮವನ್ನು ವಿವರಿಸಿದರು ಮತ್ತು ಉದ್ದೇಶಿತ ಪ್ರಸ್ತಾವನೆಯ ಪರಿಸರ ಅಘಾತ ಅಧಿಸೂಚನೆ 2006 ರ ವ್ಯಾಪ್ತಿಯಲ್ಲಿ ಸೇರಿರುವುದರಿಂದ ಪರಿಸರ ಸಾರ್ವಜನಿಕ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ಸಭೆಯ ಉದ್ದೇಶವನ್ನು ವಿವರಿಸಿ, ಸಭೆಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ಸದರಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. ಅದರಂತೆ, **ಶ್ರೀ ಡಿ.ಎಸ್.ರಮೇಶ್**, ಭಾ.ಆ.ಸೇ. **ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ** ಇವರು ಸಭೆಯ ಮಹತ್ವವನ್ನು ತಿಳಿಸಿ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್‌ನ ಪ್ರತಿನಿಧಿಯವರಿಗೆ ಯೋಜನೆಯ ಬಗ್ಗೆ ಪ್ರಸ್ಥಾವನೆ ಮಂಡಿಸಲು ನಿರ್ದೇಶಿಸಿದರು ಮತ್ತು ಯೋಜನೆಯ ಬಗ್ಗೆ ಅಭಿಪ್ರಾಯಗಳು, ಆಕ್ಷೇಪಗಳು ಇದ್ದಲ್ಲಿ ಪ್ರತಿಪಾದಕರು ಮಾಡಿದ ಪ್ರಸ್ತುತಿ ನಂತರ ತಿಳಿಸಲು ಸಾರ್ವಜನಿಕರಿಗೆ ಸೂಚಿಸಿದರು.

**ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್‌ನ ಪರವಾಗಿ ಮೆ॥ ಅಕ್ವಾಟಿಕ್ ಎನ್ವಿರೋ ಎಂಜಿನೀಯರ್ಸ್, ಬೆಂಗಳೂರು ರವರ ಪರಿಸರ ಸಲಹೆಗಾರರಾದ ಶ್ರೀ ನಂದಕುಮಾರ್, ಇವರು** ಉದ್ದೇಶಿತ ಯೋಜನೆಯ ತಾಂತ್ರಿಕ ವಿಷಯ ಕುರಿತು ಮಾತನಾಡುತ್ತಾ, ಉದ್ದೇಶಿತ ಯೋಜನೆಯ ಕಾರ್ಯಚಟುವಟಿಕೆಯಿಂದ ಆಗಬಹುದಾದ ತೊಂದರೆ ಮತ್ತು ಅದಕ್ಕೆ ಪರಿಹಾರೋಪಾಯಗಳನ್ನು ಸಭೆಯಲ್ಲಿ ವಿವರಿಸಿದರು. ಸದರಿ ಕಂಪನಿಯವರು ಪ್ರಸ್ತುತ 4800 ಟಿಸಿಡಿ ಕಬ್ಬು ನುರಿಯುವ ಮತ್ತು 24 ಮೆ.ವ್ಯಾಟ್ ಕೋ-ಜೆನ್ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಈಗ ಸಕ್ಕರೆ ಉದ್ಯಮ ಘಟಕದ ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸಲು ಪ್ರಸ್ತುತ ಉದ್ಯಮದ ಆವರಣದಲ್ಲೇ ವಿಸ್ತರಿಸಲು ಪ್ರಸ್ತಾಪಿಸಿರುತ್ತಾರೆ. ಸದರಿ ಕಂಪನಿಯ ಉದ್ದೇಶಿತ ಯೋಜನೆಗೆ ಹೆಚ್ಚುವರಿ ಜಾಗದ ಅವಶ್ಯಕತೆಯಿರುವುದಿಲ್ಲವೆಂದು ಸಭೆಯಲ್ಲಿ ವಿವರಿಸಿದರು.

**ಈ ಕೆಳಕಂಡಂತೆ ಸಾರ್ವಜನಿಕರು ತಮ್ಮ ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.**

**1. ಶ್ರೀ ಬಸವರಾಜ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ:**

ಇವರು ಮಾತನಾಡುತ್ತಾ, ಕಂಪನಿಯವರು ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಹಾಗೂ ತೆಂಗಿನ ತೋಟಗಳಿಗೆ ತೊಂದರೆಯಾಗುವ ಸಾಧ್ಯತೆಯಿರುತ್ತದೆ ಎಂದು ತಿಳಿಸಿದರು.

**2. ಶ್ರೀ ಹನುಮನಗೌಡ, ಕಾರ್ಯದರ್ಶಿ, ಕಬ್ಬು ಬೆಳೆಗಾರರ ಸಂಘ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಕಾರ್ಖಾನೆಯವರು ಈಗಿರುವ ಕಬ್ಬು ನುರಿಯುವ ಸಾಮರ್ಥ್ಯ 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಹೆಚ್ಚಿಸುವುದರಿಂದ ಕಬ್ಬು ಬೆಳೆಯುವ ರೈತರಿಗೆ ಅನುಕೂಲವಾಗುತ್ತದೆ. ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚುಸುವುದರಿಂದ ಶಬ್ಧ ಹೆಚ್ಚಾಗುತ್ತದೆ. ಇದರಿಂದ ಹೊರ ಬರುವ ಹೆಚ್ಚಿನ ಶಬ್ಧವನ್ನು ಕಾರ್ಖಾನೆಯವರು ನಿಯಂತ್ರಿಸಲು ಕ್ರಮಕೈಗೊಳ್ಳುವಂತೆ ಕೋರಿದರು. ಇದರಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಿ ಹೊರಗಡೆ ಬಿಡಲು ಕೋರಿದರು.

**3. ಶಂಕರ್, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಸದರಿ ಕಾರ್ಖಾನೆಯು ಕಬ್ಬು ನುರಿಯವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಹೆಚ್ಚುಸುವನ್ನು ರೈತರ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತಾ, ಸರ್ಕಾರಗಳು ಸ್ಮಾರ್ಟ್ ಸಿಟಿ ಯೋಜನೆಗಳನ್ನು ಹಾಕಿಕೊಂಡಂತೆ ಸ್ಮಾರ್ಟ್ ವಿಲೇಜ್‌ಗಳನ್ನಾಗಿ ಮಾಡಿದರೆ, ಗ್ರಾಮಗಳು ಅಭಿವೃದ್ಧಿ ಹೊಂದುತ್ತವೆ. ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಬಹಳ ಇದೆ, ಮಳೆ ಪ್ರಮಾಣ ಕಡಿಮೆಯಾಗಿರುವುದರಿಂದ ಈ ತರಹದ ಪರ್ಯಾಯ ವ್ಯವಸ್ಥೆಯ ಮಾಡಿಕೊಳ್ಳಬೇಕಿದೆ, ಮಳೆ ತರಿಸುವ ಮಲೆನಾಡಿನ ಗಿಡಮರಗಳನ್ನು ಶ್ಯಾಗಲಿ ಹಳ್ಳದ ಪ್ರದೇಶದಲ್ಲಿ ನಡೆಲು ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಕೋರಿದರು.

**4. ಶ್ರೀ ಮಹೇಶ್ವರಪ್ಪ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಇವರು ಕಾರ್ಖಾನೆಯವರು ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚುಸುವುದನ್ನು ಸ್ವಾಗತಿಸುತ್ತಾ, ಕಡಿಮೆ ದರದಲ್ಲಿ ಕುಕ್ಕವಾಡ ಗ್ರಾಮಕ್ಕೆ ವಿದ್ಯುತ್ ಒದಗಿಸಲು ಕೋರಿದರು ಹಾಗೂ ಕುಕ್ಕವಾಡ ಗ್ರಾಮದ ಸೇತುವೆ ಹತ್ತಿರದ ಚೆಕ್ ಡ್ಯಾಂನಲ್ಲಿ ಬಹಳಷ್ಟು ಹೂಳು ತುಂಬಿದ್ದು, ಹೂಳನ್ನು ತೆಗೆಯಿಸಿ ಕೊಡಲು ಕೋರಿದರು.

5. **ಶ್ರೀ ಜಗದೀಶ್, ಕುಕ್ಕವಾಡ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಸದರಿ ಯೋಜನೆಗೆ ಒಪ್ಪಿಗೆಯನ್ನು ಸೂಚಿಸುತ್ತಾ, ಸದರಿ ಕಾರ್ಖಾನೆಯವರು ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸುವುದರಿಂದ ಕಬ್ಬು ನುರಿಯುವ ಸಾಮರ್ಥ್ಯ ಹೆಚ್ಚಾಗಿ ರೈತರು 2 ರಿಂದ 3 ದಿನ ಕಾಯುವ ಬದಲಾಗಿ 2 ರಿಂದ 3 ತಾಸುಯೊಳಗೆ ಗಾಡಿಗಳು ಅನ್‌ಲೋಡ್ ಆಗುತ್ತವೆ. ರಾಜ್ಯದಲ್ಲಿ ಯಾವ ಸಕ್ಕರೆ ಕಾರ್ಖಾನೆಗಳು ಸಹ ರೈತರ ಹಣವನ್ನು ಸಂಪೂರ್ಣವಾಗಿ ನೀಡಿರುವುದಿಲ್ಲ. ಆದರೆ ಸದರಿ ಕಾರ್ಖಾನೆಯವರು ಕಬ್ಬು ಒದಗಿಸುವ ರೈತರ ಹಣವನ್ನು ಸಂಪೂರ್ಣವಾಗಿ ಸಂದಾಯ ಮಾಡಿರುತ್ತಾರೆ. ಸದರಿ ಕಾರ್ಖಾನೆಯಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಿ ಶ್ಯಾಗಲಿ ಹಳ್ಳಕ್ಕೆ ಬಿಡುವಂತೆ ಕೋರಿದರು. ಇಲ್ಲಿನ ರೈತರಿಗೆ ಅನುಕೂಲ ಮಾಡಿಕೊಡಲು ಚೆಕ್ ಡ್ಯಾಂನಲ್ಲಿ ತುಂಬಿರುವ ಹೂಳನ್ನು ತೆಗೆಯಿಸಿ ಕೊಡಲು ಕೋರಿದರು.

6. **ಶ್ರೀ ಮಲ್ಲಿಕಾರ್ಜುನ, ಮಾಜಿ ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಕುಕ್ಕವಾಡ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಸದರಿ ಯೋಜನೆಯನ್ನು ಸ್ವಾಗತಿಸುತ್ತಾ, ಸದರಿ ಕಾರ್ಖಾನೆಯವರು ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸುವುದರಿಂದ ಗ್ರಾಮದಲ್ಲಿ ಉಷ್ಣತೆ ಹೆಚ್ಚಾಗುವ ಸಾಧ್ಯತೆಯಿರುವುದರಿಂದ ಕ್ರಮಕೈಗೊಳ್ಳಲು ಕೋರಿದರು. ಇಲ್ಲಿನ ರೈತರಿಗೆ ನೀರಿನ ವ್ಯವಸ್ಥೆ ಮಾಡಬೇಕು, ಕಬ್ಬನ್ನು ಬೆಳೆಯುವ ರೈತರಿಗೆ ನೀರಿನ ಅನುಕೂಲ ಮಾಡಿಕೊಡಬೇಕು, ಸದರಿ ಕಾರ್ಖಾನೆಯಲ್ಲಿ ಸ್ಥಳೀಯರಿಗೆ ಹಾಗೂ ಕಾರ್ಖಾನೆಗಾಗಿ ಜಮೀನು ಕಳೆದುಕೊಂಡವರಿಗೆ ಉದ್ಯೋವನ್ನು ಒದಗಿಸುವಂತೆ ಕೋರಿದರು. ವರ್ಷದ ಡಿಸೆಂಬರ್‌ನಿಂದ ಏಪ್ರಿಲ್‌ನವರಿಗೆ ಧೂಳಿನ ಕಣಗಳ ಪ್ರಮಾಣ ಹೆಚ್ಚಾಗಿರುತ್ತದೆ. ಅದನ್ನು ನಿಯಂತ್ರಿಸಲು ಕ್ರಮಕೈಗೊಳ್ಳುವಂತೆ ಕೋರಿದರು.

7. **ಶ್ರೀ ರಾಜಣ್ಣ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಇವರು ಸದರಿ ಯೋಜನೆಯನ್ನು ಸ್ವಾಗತಿಸುತ್ತಾ, ಸದರಿ ಕಾರ್ಖಾನೆಯವರು ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸುವುದರಿಂದ ವಾಹನಗಳ ಓಡಾಡ ಹೆಚ್ಚಾಗುವ ಸಾಧ್ಯತೆಯಿರುತ್ತದೆ. ಇದರಿಂದ ತೊಂದರೆಯಾಗುವ ಸಂಭವಿರುತ್ತದೆ. ಆದ್ದರಿಂದ ಗ್ರಾಮದಲ್ಲಿ ಹಾದುಹೋಗಿರುವ ಮುಖ್ಯ ರಸ್ತೆಯನ್ನು ಅಗಲೀಕರಣಗೊಳಿಸಿ ಉತ್ತಮ ಪಡಿಸಿಕೊಡಲು ಕೋರಿದರು.

8. **ಶ್ರೀ ಲಿಂಗರಾಜು, ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಇವರು ಸದರಿ ಕಾರ್ಖಾನೆಯವರು ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸುವುದರಿಂದ ಅನುಕೂಲವಾಗುತ್ತದೆ ಎಂದು ತಿಳಿಸಿದರು.

9. **ಶ್ರೀ ಹನುಮಂತಪ್ಪ, ಮತ್ತಿಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಇವರು ಕಾರ್ಖಾನೆಯವರು ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸುವುದರಿಂದ ಇಲ್ಲಿನ ರೈತರ ಆರ್ಥಿಕ ಸ್ಥಿತಿಗತಿ ಉತ್ತಮಗೊಳ್ಳುತ್ತದೆ. ಸದರಿ ಕಾರ್ಖಾನೆಯವರ ರೈತರ ಬಾಕಿಯನ್ನು ಉಳಿಸಿಕೊಂಡಿರುವುದಿಲ್ಲ. ಸುತ್ತಮುತ್ತಲಿನ ಹಳ್ಳ ಮತ್ತು ಕೆರೆಗಳಲ್ಲಿ ನೀರು ಇಲ್ಲದೆ ಇರುವುದರಿಂದ ತೊಂದರೆಯಾಗಿರುತ್ತದೆ. ಆದ್ದರಿಂದ ಗ್ರಾಮಕ್ಕೆ ನೀರಿನ ವ್ಯವಸ್ಥೆ ಹಾಗೂ ಸದರಿ ಯೋಜನೆಯಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರಿನಿಂದ ಪರಿಸರಕ್ಕೆ ತೊಂದರೆಯಾಗದಂತೆ ಉದ್ದೇಶಿತ ಯೋಜನೆಯನ್ನು ಪ್ರಾರಂಭಿಸಬಹುದಾಗಿರುತ್ತದೆ. ಸುತ್ತಮುತ್ತಲಿನ ರೈತರುಗಳು ಕಬ್ಬನ್ನು ಬೆಳೆದು ಸದರಿ ಕಾರ್ಖಾನೆಗೆ ನೀಡಿ ಹಣ ಪಡೆಯಲು ಅನುಕೂಲವಾಗುತ್ತದೆ. ಸದರಿ ಕಾರ್ಖಾನೆಯ ಆಡಳಿತ ಮಂಡಳಿಯವರು ಗ್ರಾಮಕ್ಕೆ ಹಾಗೂ ರಾಜ್ಯಕ್ಕೆ ವಿದ್ಯುತ್ ಒದಗಿಸಲು ವ್ಯವಸ್ಥೆ ತೆಗೆದುಕೊಳ್ಳುವಂತೆ ಹಾಗೂ ಸಾರ್ವಜನಿಕರುಗಳಿಗೆ ಹಾಗೂ ಜಾನುವಾರುಗಳಿಗೆ ಬದ್ಧತೆ ಪೂರ್ವಕವಾಗಿ ಮಾಡುವಂತೆ ಕೋರಿದರು.

**10. ಶ್ರೀ ಮಲ್ಲೇಶಪ್ಪ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಇವರು ಸದರಿ ಕಾರ್ಖಾನೆಯವರು ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚುಸುವುದನ್ನು ಸ್ವಾಗತಿಸುತ್ತಾ, ಕುಕ್ಕವಾಡ ಗ್ರಾಮದಲ್ಲಿ ಬೆಳೆದಷ್ಟು ಕಬ್ಬನ್ನು ಸುತ್ತಮುತ್ತಲಿನ ಯಾವ ಗ್ರಾಮದಲ್ಲೂ ಬೆಳೆಯುವುದಿಲ್ಲ. ಈ ಸಲ ನೀರಿನ ಕೊರತೆಯಿಂದ ಕಬ್ಬನ್ನು ಬೆಳೆಯಲು ಆಗಿರುವುದಿಲ್ಲ. ನೀರು ಶೇಖರಣೆಗಾಗಿ ಗ್ರಾಮದ ಚೆಕ್ ಡ್ಯಾಂನಲ್ಲಿರುವ ಹೂಳನ್ನು ತೆಗೆಸಲು ಕೋರಿದರು.

**11. ಶ್ರೀ ಶಿವಣ್ಣ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಕಾರ್ಖಾನೆಯವರು ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚುಸುವುದರಿಂದ ಸುತ್ತಮುತ್ತಲಿನ ರೈತರಿಗೆ ಅನುಕೂಲವಾಗುತ್ತದೆ. ನೀರು ಶೇಖರಣೆಗಾಗಿ ಗ್ರಾಮದ ಚೆಕ್ ಡ್ಯಾಂನಲ್ಲಿರುವ ಹೂಳನ್ನು ತೆಗೆಸಲು ಕ್ರಮ ಕೈಗೊಳ್ಳುವಂತೆ ಕೋರಿದರು.

**12. ಶ್ರೀ ಸುರೇಶ್, ನಾಗಸನಹಳ್ಳಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಇವರು ಸದರಿ ಕಾರ್ಖಾನೆಯವರು ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚುಸುವ ಯೋಜನೆಯು ಒಳ್ಳೆಯ ಕಾರ್ಯಕ್ರಮವಾಗಿರುತ್ತದೆ ಎಂದು ತಿಳಿಸಿದರು.

**ಶ್ರೀ ಉಮಾಪತಿ, ವಿಶೇಷ ಹಣಕಾಸು ಅಧಿಕಾರಿಗಳು, ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್** ಇವರು ಪರಿಸರ ಸಾರ್ವಜನಿಕ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ಅನಿಸಿಕೆಗಳಿಗನುಗುಣವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

1. ಸಾರ್ವಜನಿಕರ ಅನುಕೂಲಕ್ಕಾಗಿ ಶ್ಯಾಗಲಿ ಹಳ್ಳದ ಚೆಕ್ ಡ್ಯಾಂನಲ್ಲಿ ತುಂಬಿರುವ ಹೂಳನ್ನು ಸ್ವಚ್ಛಗೊಳಿಸಲಾಗುವುದು.
2. ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಮಾಲಿನ್ಯ ನಿಯಂತ್ರಣ ಮಂಡಳಿ ಮಾನಕಗಳಿಗನುಗುಣವಾಗಿ ಸಂಸ್ಕರಿಸಲಾಗುವುದು ಹಾಗೂ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕಾರ್ಖಾನೆಯ ಆವರಣದಲ್ಲಿ ಮತ್ತು ವ್ಯವಸಾಯದ ಜಮೀನುಗಳಲ್ಲಿ ಉಪಯೋಗಿಸಲಾಗುವುದು.
3. ಕಾರ್ಖಾನೆಯಲ್ಲಿ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಸೂಕ್ತ ಮಾಲಿನ್ಯ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲಾಗುವುದು.
4. ಕಾರ್ಖಾನೆಯ ಉದ್ದೇಶಿತ ಯೋಜನೆಯಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಒದಗಿಸಲಾಗುವುದು.
5. ಕಾರ್ಖಾನೆಯ ಸಿ.ಎಸ್.ಆರ್. ಸ್ಕೀಮ್‌ನಲ್ಲಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಾಮಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷರಾದ **ಶ್ರೀ ಡಿ.ಎಸ್.ರಮೇಶ್**,ಭಾ.ಆ.ಸೇ. **ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ** ಇವರು ಸಭೆಯಲ್ಲಿ ಮಾತನಾಡುತ್ತಾ, ಸಾರ್ವಜನಿಕರು ಸದರಿ ಯೋಜನೆಯ ಬಗ್ಗೆ ಅನಿಸಿಕೆಗಳನ್ನು ವ್ಯಕ್ತಪಡಿಸಿರುವ ಪ್ರಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದರು.

1. ಸದರಿ ಕಾರ್ಖಾನೆಯಲ್ಲಿ ವಿದ್ಯುತ್ ಉತ್ಪಾದನೆಯಿಂದ ಬರುವ ಶಬ್ಧವನ್ನು ನಿಯಂತ್ರಿಸಲು ಕ್ರಮಕೈಗೊಳ್ಳುವುದು.
2. ಕಾರ್ಖಾನೆಯಲ್ಲಿ ಮಾಲಿನ್ಯವನ್ನು ನಿಯಂತ್ರಿಸಲು ಆಧುನಿಕ ಉಪಕರಣಗಳನ್ನು ಅಳವಡಿಸಿಕೊಳ್ಳುವುದು.
3. ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ನೇರವಾಗಿ ಶ್ಯಾಗಲಿ ಹಳ್ಳ ಸೇರದಂತೆ ಕ್ರಮಕೈಗೊಳ್ಳುವುದು.
4. ಸಂಸ್ಕರಿಸಿದ ತ್ಯಾಜ್ಯ ನೀರನ್ನು ರೈತರ ಉಪಯೋಗಕ್ಕೆ ಒದಗಿಸುವುದು.
5. ರಸ್ತೆಗಳ ಅಭಿವೃದ್ಧಿಗೆ ಆಧ್ಯತೆ ಕೊಡುವುದು.
6. ಸದರಿ ಕಾರ್ಖಾನೆಯಲ್ಲಿ ಜಮೀನು ಕಳೆದುಕೊಂಡವರಿಗೆ ಹಾಗೂ ಸ್ಥಳೀಯವರಿಗೆ ಉದ್ಯೋಗಾವಕಾಶವನ್ನು ಒದಿಸುವುದು.

ಮುಂದುವರೆದು, ಸಭೆಯ ನಡಾವಳಿಯೊಂದಿಗೆ ವಿಡಿಯೋ ಸಿಡಿ, ಛಾಯಾ ಚಿತ್ರಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ರವರ ಮುಖಾಂತರ ಕೇಂದ್ರ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸುವುದಾಗಿ ತಿಳಿಸಿದರು.

ಸಭೆಗೆ ಆಗಮಿಸಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಡಿ.ಎಸ್. ರಮೇಶ್,** ಭಾ.ಆ.ಸೇ.
ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ಪರಿಸರ ಸಾರ್ವಜನಿಕ ಸಭೆ, ಕುಕ್ಕವಾಡ ಗ್ರಾಮ,
ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.